ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 25–10–2021

# ಪತ್ರಿಕಾ ಪ್ರಕಟಣೆ

**PRESS RELEASE**

## ದೀಪ ಸಂಜೀವಿನಿಗೆ – ಕೌಶಲ್ಯಾಭಿವೃದ್ಧಿ ಕಾರ್ಯದರ್ಶಿಗಳಿಂದ ಚಾಲನೆ

ಸ್ವ–ಸಹಾಯ ಗುಂಪಿನ ಮಹಿಳೆಯರು ತಯಾರಿಸಿರುವ ಹಣತೆಯೊಂದಿಗೆ ದೀಪಾವಳಿ ಆಚರಿಸುವ ದೀಪ ಸಂಜೀವಿನಿ ಅಭಿಯಾನಕ್ಕೆ ಇಲಾಖೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಕಾರ್ಯದರ್ಶಿ ಡಾ॥ ಸೆಲ್ವಕುಮಾರ್ ಅವರು ಇಂದು ಚಾಲನೆ ನೀಡಿದರು.

ನಂತರ ಮಾತನಾಡಿದ ಕಾರ್ಯದರ್ಶಿಗಳು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕಾರ್ಯಕ್ರಮದಡಿ ಈ ವರ್ಷದ ದೀಪಾವಳಿಯ ವಿಶೇಷವಾಗಿ ಸ್ವ–ಸಹಾಯ ಗುಂಪಿನ ಮಹಿಳೆಯರು ತಯಾರಿಸಿರುವ ಹಣತೆಯನ್ನು ಬೆಳಗುವುದರೊಂದಿಗೆ ದೀಪಾವಳಿ ಆಚರಿಸೋಣ ಎಂಬ ಅಭಿಯಾನ ಆರಂಭಿಸಲಾಗಿದೆ. ರಾಜ್ಯಾದ್ಯಂತ ಆಚರಿಸಲ್ಪಡುತ್ತಿರುವ ಈ ಅಭಿಯಾನದಲ್ಲಿ ಸ್ವ–ಸಹಾಯ ಗುಂಪಿನ ಮಹಿಳೆಯರು ತಮ್ಮ ಕರಕೌಶಲ್ಯ, ಕರಚಳಕದಿಂದ ವಿವಿಧ ವಿನ್ಯಾಸದ ಮಣ್ಣಿನ ಹಣತೆಗಳನ್ನು ತಯಾರಿಸಲಾಗಿದ್ದು ದಿನಾಂಕ: 25–10–2021 ರಿಂದ 30–10–2021ರ ಅವುಗಳ ಮಾರಾಟಕ್ಕಾಗಿ ವಿವಿಧ ಸ್ಥಳಗಳಲ್ಲಿ ಮಳಿಗೆಗಳನ್ನು ಸ್ಥಾಪಿಸಲಾಗಿದೆ.

ಬೆಂಗಳೂರಿನ ಬಹುಮಹಡಿ ಕಟ್ಟಡದ ಆವರಣದ ಅರಳಿಮರದ ಹತ್ತಿರ ಸ್ಥಾಪಿಸಿರುವ ಈ ದೀಪ ಸಂಜೀವಿನಿ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಇಂದು ಉದ್ಘಾಟಿಸಲಾಯಿತು. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿಗಳಾದ ಡಾ॥–ಸೆಲ್ವಕುಮಾರ್ ಎಸ್. ಐ.ಎ.ಎಸ್. ರವರು ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡುತ್ತಾ "ಮಹಿಳೆಯರು ಸಂಘಟನೆ ಮೂಲಕ ತಮ್ಮ ಕೌಶಲ್ಯ ಹಾಗೂ ಚಾಕಚಕ್ಯತೆಯನ್ನು ಉಪಯೋಗಿಸಿ ತಯಾರಿಸಿರುವ ಈ ಹಣತೆಗಳು ಸ್ವಾಭಿಮಾನದ ಸಂಕೇತವಾಗಿದ್ದು, ಪ್ರತಿಯೊಬ್ಬರೂ ಈ ವರ್ಷದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ತಮ್ಮ ಮನೆಗಳಲ್ಲಿ ಈ ಹಣತೆಗಳೊಂದಿಗೆ ದೀಪಾವಳಿ ಹಬ್ಬವನ್ನು ಅಚರಿಸುವ ಮೂಲಕ ಈ ಅಭಿಯಾನಕ್ಕೆ ಬೆಂಬಲ ನೀಡಬೇಕೆಂದು ಕರೆ ನೀಡಿದರು."

ಬೆಂಗಳೂರಿನ ಬಿ.ಬಿಎಂ.ಪಿ ಆವರಣ, ಮೈಷುಗರ್ ಬಿಲ್ಡಿಂಗ್, ಖನಿಜ ಭವನ, ಕಾವೇರಿ ಭವನ ಸರ್ವೆ ಸೆಟಲ್‌ಮೆಂಟ್ ಕಛೇರಿ ಆವರಣ ಮುಂತಾದ ಕಡೆಗಳಲ್ಲಿ ಈ ದೀಪ ಮಾರಾಟದ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ ಸ್ವ–ಸಹಾಯ ಮಹಿಳೆಯರು ತಯಾರಿಸಿರುವ ವಿಭಿನ್ನ ಮಾದರಿಯ ಹಣತೆಗಳು ಲಭ್ಯವಿರುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಜೀವಿನಿ ರಾಜ್ಯ ಗ್ರಾಮೀಣ ಜೀವನೋಪಾಯ ಸಂಸ್ಥೆಯ ಅಭಿಯಾನ ನಿರ್ದೇಶಕರಾದ ಕುಮಾರಿ. ಮಂಜುಶ್ರೀ ಎನ್. ರವರು ಮಾತನಾಡುತ್ತಾ, ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳ ಆವರಣಗಳಲ್ಲಿ ಈ ದೀಪ ಮಾರಾಟದ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯ ನೇತೃತ್ವದಲ್ಲಿ ಈ ಅಭಿಯಾನದ ಯಶಸ್ವಿಗೆ ಕಾರ್ಯಕ್ರಮ ರೂಪಿಸಲಾಗಿದ್ದು,

ಸಾರ್ವಜನಿಕರು ಈ ದೀಪಗಳನ್ನು ಖರೀದಿಸುವ ಮೂಲಕ ಮಹಿಳೆಯರ ಉದ್ಯಮ ಬೆಳವಣಿಗೆಗೆ ಬೆಂಬಲಿಸಬೇಕೆಂದು ಕೋರಿದರು.

ಈಗಾಗಲೇ ಈ ದೀಪಗಳು ಅಮೇಜಾನ್ ಆನ್‌ಲೈನ್ ಮಾರಾಟ ಜಾಲದಲ್ಲಿ ಲಭ್ಯವಿದ್ದು ಈ ವೇದಿಕೆ ಮೂಲಕವೂ ವಿವಿಧ ವಿನ್ಯಾಸದ ದೀಪಗಳನ್ನು ಖರೀದಿಸುವ ಅವಕಾಶ ಕಲ್ಪಿಸಲಾಗಿದೆ. ಸದ್ಯದಲ್ಲಿ ಕಲ್ಚರ್ ಸ್ಟ್ರೀಟ್ ಆನ್‌ಲೈನ್ ವೇದಿಕೆಯಲ್ಲಿ ಖರೀದಿಸಲು ಈ ದೀಪಗಳು ಲಭ್ಯವಾಗಲಿವೆ.

ಈ ಸಂದರ್ಭದಲ್ಲಿ ಬಹುಮಹಡಿ ಕಟ್ಟಡದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಸಂಜೀವಿನಿ ಸಂಸ್ಥೆಯ ಅಪರ ಅಭಿಯಾನ ನಿರ್ದೇಶಕರು, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಯೋಜನಾ ನಿರ್ದೇಶಕರು ನಗರ ಅಭಿಯಾನ, ಉಪ ನಿರ್ದೇಶಕರುಗಳು, ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

**ಉತ್ತಮ ಪ್ರತಿಕ್ರಿಯೆ:–**

ಕಾರ್ಯಕ್ರಮದ ಉದ್ಘಾಟನೆಯ ನಂತರ ಬಹುಮಹಡಿ ಕಟ್ಟಡದ ಮಳಿಗೆಗಳಲ್ಲಿ ಸುತ್ತಲಿನ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸಾರ್ವಜನಿಕರು ಭೇಟಿ ನೀಡಿ ದೀಪಗಳನ್ನು ಖರೀದಿಸುವ ಮೂಲಕ ಉತ್ತಮ ಪ್ರತಿಕ್ರಿಯೆ ನೀಡಿರುವುದು ವರದಿಯಾಗಿದೆ.

## Deepa Sanjeevini

Deepa Campaign to promote SHG made earthen Deepas (Diyas) during the Deepavali Celebration by Secretary, SDEL Department:

Sanjeevini – KSRLPS under SDEL Department, Government of Karnataka is launching a campaign to promote SHG made earthen diyas during the forthcoming Deepavali season for social and economic rejuvenation of SHG women particularly poor in the state. As part of the state-wide campaign, the clay and terracotta hand crafted diyas made by SHG women will be made available for purchase from 25-10-2021 to 30-10-2021 at various locations in Karnataka including important Government Offices in Bangalore. The lamp sales outlets have been set up in the premises of Mysugar Building, Khanija Bhavan, Kaveri Bhavan, Survey Settlement Office, BESCOM Office, BBMB Office etc.

The Deepa Sanjeevini Stall on the ground floor of M.S Building was officially inaugurated today by Dr. Selvakumar S IAS, Secretary, Department of Skill Development, Entrepreneurship and Livelihood of Government of Karnataka. Inaugurating the Stall, he said, "These Deepas made by women using their traditional skills and knowledge is a sign of self-respect. Everyone is requested to support this campaign by lighting SHG made deepas in their homes during this year's Deepavali festival."

Speaking on this occasion, the Mission Director of the State Rural Livelihood Mission, Ms Manjushree N IAS said that sales outlets have been set up in the District Panchayat and Taluk Panchayats in all districts of the state under the leadership of the Chief Executive Officers of the District Panchayat.

These lamps are also available on various online platforms like Amazon Portal, Kulture Street etc to facilitate the customers to buy lamps with different designs.

Officers and staff members of various departments, Sanjeevini Mission Additional Mission Director, Chief Operating Officer, Deputy Directors, Project Officer - NULM the, State Program Managers and other officials were present.

Officers of various departments, staffs and the general public around the M.S Building visited the store and purchased the lamps.

**ನಗರಾಭಿವೃದ್ಧಿ ಸಚಿವರ ಪ್ರವಾಸ**

**ಬೆಂಗಳೂರು, ಅಕ್ಟೋಬರ್ 25, 2021(ಕರ್ನಾಟಕ ವಾರ್ತೆ):**

ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ (ಭೈರತಿ) ಅವರು 25ನೇ ಅಕ್ಟೋಬರ್ 2021 ರಿಂದ 27ನೇ ಅಕ್ಟೋಬರ್ 2021 ರವರೆಗೆ ವಿಜಯಪುರ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ದಿನಾಂಕ 27ನೇ ಅಕ್ಟೋಬರ್ 2021ರಂದು ಕೇಂದ್ರ ಸ್ಥಾನಕ್ಕೆ ಹಿಂದಿರುಗುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಅಬಕಾರಿ ಸಚಿವರ ಪ್ರವಾಸ**

**ಬೆಂಗಳೂರು, ಅಕ್ಟೋಬರ್ 25, 2021(ಕರ್ನಾಟಕ ವಾರ್ತೆ):**

ಅಬಕಾರಿ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಅವರು 26ನೇ ಅಕ್ಟೋಬರ್ 2021 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

“ಕನ್ನಡ ಮತ್ತು ಸಂಸ್ಕೃತಿ ಸಪ್ತಾಹ”

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ):

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಅಕ್ಟೋಬರ್ 24 ರಿಂದ ನವೆಂಬರ್ 1ರ ವರೆಗೆ ಹಮ್ಮಿಕೊಂಡಿರುವ “ಕನ್ನಡ ಮತ್ತು ಸಂಸ್ಕೃತಿ ಸಪ್ತಾಹ” ಆಚರಣೆ ಅಂಗವಾಗಿ ಅಕ್ಟೋಬರ್ 28 ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯಾದ್ಯಂತ ಏಕಕಾಲದಲ್ಲಿ “ನಾಡಗೀತೆ” ಮತ್ತು ನಾಡಿನ ಪ್ರೇಮವನ್ನು ವ್ಯಕ್ತಪಡಿಸುವಂತಹ “ಬಾರಿಸು ಕನ್ನಡ ಡಿಂಡಿಮವ, ನಿತ್ಯೋತ್ಸವ ಹಾಗೂ ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು” ಗೀತೆಗಳನ್ನು ಹಾಡಲು ಎಲ್ಲಾ ಇಲಾಖೆಯ ಮತ್ತು ಸಂಸ್ಥೆಗಳ ಎಲ್ಲಾ ಅಧಿಕಾರಿ–ನೌಕರರು ಹಾಗೂ ಸಿನಿಮಾ ಮತ್ತು ಕಿರುತೆರೆ ಕ್ಷೇತ್ರದ ಜನಪ್ರಿಯ ವ್ಯಕ್ತಿಗಳು ಇದರಲ್ಲಿ ಭಾಹವಹಿಸಬಹುದೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 25.10.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 33 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 42 | ಉತ್ತಮ | CO |
| 3 | ಕವಿಕ, ಮೈಸೂರುರಸ್ತೆ | 54 | ತೃಪ್ತಿಕರ | CO |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 42 | ಉತ್ತಮ | Ozone |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 47 | ಉತ್ತಮ | CO |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 70 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 45 | ಉತ್ತಮ | $PM_{10}$ |
| **(25.10.2021 at 12.05 PM)** | | | | |
| 8 | BWSSB,ಕಾಡಬೀಸನಹಳ್ಳಿ | 58 | ತೃಪ್ತಿಕರ | CO |
| 9 | ಪೀಣ್ಯ | 69 | ತೃಪ್ತಿಕರ | $NO_2$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 25.10.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 33 | Good | $PM_{10}$ |
| 2 | Jayanagar 5th Block, Shalini ground | 42 | Good | CO |
| 3 | KAVIKA, Mysore Road | 54 | Satisfactory | CO |
| 4 | Rajeev Gandhi Institute of Chest Disease, NIMHANS, Hombegowda Nagar | 42 | Good | Ozone |
| 5 | HSR Layout, near Central Silkboard | 47 | Good | CO |
| 6 | City Railway Station, Magestic, Bengaluru | 70 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 45 | Good | $PM_{10}$ |
| **(25.10.2021 at 12.05 PM)** | | | | |
| 8 | BWSSB, Kadabesanahalli | 58 | Satisfactory | CO |
| 9 | Peenya | 69 | Satisfactory | $NO_2$ |
| 10 | BTM Layout | * | * | * |

*Data not available

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |